ಶ್ರೀ ಟಿ.ಬಿ. ಜಯಚಂದ್ರ:– Education ಬಗ್ಗೆ ಇರುವ ಬಿಲ್ ಒಂದನ್ನು ಮಾಡಿಕೊಡಿ. ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕದ ಬಗ್ಗೆ ನಾಳೆ ಬೇಕಾದರೆ ಚರ್ಚೆ ಮಾಡೋಣ. ಈ Education bill ಒಂದನ್ನು atleast ಮಾಡಿಕೊಡಿ. I have to introduce in the Council.

ಶ್ರೀ ಜಗದೀಶ್ ಶೆಟ್ಟರ್:– ಅದನ್ನು ಮಾಡಬೇಡಿ ಎಂದು ಹೇಳುವುದಿಲ್ಲ. ಆದರೆ ಬೆಳಿಗ್ಗೆ ಸಭಾಧ್ಯಕ್ಷರು ಉತ್ತರ ಕರ್ನಾಟಕದ ಜಿಲ್ಲೆಗಳ ಸಮಸ್ಯೆ ಬಗ್ಗೆ ಚರ್ಚೆ ಮಾಡಬೇಕು ಎಂದು ಸಮಯ ನಿಗದಿಪಡಿಸಿದ್ದರು. ಇದರ ಮೇಲೆ ನಾನು ಉಪಾಧ್ಯಕ್ಷರಿಗೆ ಬಿಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ:– ಇದರಲ್ಲಿ ಚರ್ಚೆಯೇ ಇಲ್ಲ. ಇದು ordinance replacement ಅಧ್ಯಕ್ಷರೇ.

ಉಪಾಧ್ಯಕ್ಷರು:– ಆಯಿತು. ಈಗ ಶಿಕ್ಷಣದ ಬಗ್ಗೆ ಇರುವ bill considerationಗೆ ಇದೆ ಇದನ್ನು ಪ್ರಸ್ತಾಪ ಮಾಡಿ.

4) ಕರ್ನಾಟಕ ಶಿಕ್ಷಣ (ತಿದ್ದುಪಡಿ) ವಿಧೇಯಕ 2014

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಉಪಾಧ್ಯಕ್ಷರೆ, 2014 ನೇ ಸಾಲಿನ ಶಿಕ್ಷಣ (ತಿದ್ದುಪಡಿ) ವಿಧೇಯಕವನ್ನು ಇಂದು ಮಂಡನೆ ಮಾಡಿದ್ದೇವೆ. ಕನ್ನಡದಲ್ಲಿ ಪಾಸ್ ಮಾಡಿರುವಂಥವರಿಗೆ 01–01–1974 ರಿಂದ 2–9–1987 ರಲ್ಲಿ ಸರ್ಕಾರಿ ಶಾಲೆಯಲ್ಲಿರುವವರಿಗೆ ಬೋಧಕ/ಬೋಧಕೇತರರಿಗೆ ಒಂದು increment ಕೊಡಬೇಕೆಂದು ಹೇಳಿ ತೀರ್ಮಾನವಾಗಿತ್ತು. ಆ ಹಿನ್ನೆಲೆಯಲ್ಲಿ private institutions ನವರು ಸಹ ಕೋರ್ಟ್‌ಗೆ ಹೋದರು. ಕೋರ್ಟ್ ಎಂದರೆ ultimately Supreme Court ನವರೆಗೆ ಹೋದರು. ಸುಪ್ರೀಂಕೋರ್ಟ್‌ನಲ್ಲಿ ಕೇಸ್ ಅವರ ಪರವಾಯಿತು. ಅವರಿಗೂ ಕೊಡುವಂತೆ consider ಮಾಡಿ ಎಂದಾಯಿತು. ಇದಾದ ಮೇಲೆ appeal ಹೋಗಿದ್ದವರು ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ವಿಶ್ವೇಶ್ವರ

ಹೆಗಡೆ ಕಾಗೇರಿಯವರೇ ಆ ಬಗ್ಗೆ Supreme Court ನಲ್ಲಿ appeal ಹಾಕಿದ್ದರು. ಆ appeal ಕೂಡ reject ಆಯಿತು. ಆದರೆ ಅವರಿಗೆ increment ಕೊಡಬೇಕೆಂದರೆ, ಕರ್ನಾಟಕದಲ್ಲಿ ಕನ್ನಡ ಶಾಲೆಯಲ್ಲಿ ಓದಿದವರಿಗೆ increment ಕೊಡಬೇಕೆಂದರೆ ಸುಮಾರು 300.00 ಕೋಟಿ ರೂಪಾಯಿಗಳವರೆಗೆ ವೆಚ್ಚ ಬರುತ್ತಿತ್ತು. ಏಕೆಂದರೆ ಅದಕ್ಕೆ 17,596 ಜನ eligible ಇದ್ದು ಅದನ್ನು claim ಮಾಡುತ್ತಿದ್ದರು. ಅವರಿಗೆ 300.00 ಕೋಟಿ ರೂಪಾಯಿಗಳನ್ನು ಕೊಡಬೇಕಾಯಿತು. ಸಾಕಷ್ಟು contempt petitions ನಮ್ಮ ಮೇಲೆ file ಆದವು. ಆ contempt petitions ಅನ್ನು ನೋಡಿದಾಗ ಅನಿವಾರ್ಯವಾಗಿ ಒಂದು amendment ತರುವುದು ಸೂಕ್ತವೆಂದು ಹೇಳಿ ಈಗಾಗಲೇ ಒಂದು ordinance ಮುಖೇನ ತಂದು ಅದನ್ನು ಸರಿಮಾಡಿಸಿದ್ದೇವೆ. ಅದರ replacement ಗೋಸ್ಕರ ಇವತ್ತು ಈ ವಿಧೇಯಕವನ್ನು ಸದನದ ಮುಂದೆ ತಂದಿದ್ದೇವೆ. ಬಹುಶಃ ಇದು it is only a consequential amendment brought to the House.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಉಪಾಧ್ಯಕ್ಷರೆ, ನಾನು ಶಿಕ್ಷಣ ಸಚಿವನಾಗಿ ಕೆಲಸ ಮಾಡುವಂಥ ಸಂದರ್ಭದಲ್ಲಿ ಕನ್ನಡ increment ಕೊಡುವಂಥ ವಿಷಯವು ಸರ್ಕಾರದ ಮುಂದೆ ಬಹಳ ಗಂಭೀರವಾಗಿ ಅನೇಕ ಬಾರಿ ಪ್ರಸ್ತಾಪ ಆಗಿತ್ತು. ಇದರಲ್ಲಿ ಮೊದಲಿನಿಂದ ಆಗಿರುವ ತಪ್ಪೇನೆಂದರೆ, ಈಗ ತೆಲುಗು, ತಮಿಳು ಬೇರೆ ಬೇರೆ ಭಾಷೆಗಳು ಮಾತೃಭಾಷೆಯಾಗಿದ್ದು ಅದನ್ನು ಕಲಿಸುತ್ತಿರುವವರು ಯಾರಿದ್ದಾರೆ ಅವರು ಕನ್ನಡ ಭಾಷೆಯನ್ನು ಕಲಿತಿದ್ದರೆ ಅವರಿಗೆ ಒಂದು increment ಕೊಡಬೇಕೆಂದು ಒಂದು ಸಂದರ್ಭದಲ್ಲಿ ನಿರ್ಣಯವಾಯಿತು. ಬೇರೆ ಬೇರೆ ಭಾಷೆಗಳು ಮಾತೃಭಾಷೆಯಾಗಿದ್ದು ಅದನ್ನು ಕಲಿಸುತ್ತಿರುವವರಿಗೆ ಕನ್ನಡ increment ಕೊಡುವುದರಲ್ಲಿ ಒಂದು logic ಇದೆ. ಮಧ್ಯದಲ್ಲಿ ತಪ್ಪು ಎಲ್ಲಿ ಆಯಿತೆಂದರೆ ಅಥವಾ ಆ ಸಂದರ್ಭದಲ್ಲಿ ಆ ರೀತಿ ಏಕೆ ನಿರ್ಣಯವಾಯಿತೆಂದು ಹಿಂದೆ ಸರ್ಕಾರ ಮತ್ತು ಅಧಿಕಾರಿಗಳ ಮಧ್ಯೆ ನಡೆದಿರುವುದನ್ನು ನೋಡಿದರೆ ಕನ್ನಡ ಮಾತೃಭಾಷೆಯಾಗಿರುವವರು ಕನ್ನಡವನ್ನು ಕಲಿಸುತ್ತಿರುವವರಿಗೂ ಒಂದು

increment ಕೊಡಬೇಕೆಂದು ಆಗಿ ಕೆಲವರಿಗೆ increment ಕೊಟ್ಟುಬಿಟ್ಟರು. ಈ ತಪ್ಪಾಗಿರುವುದು ಎಲ್ಲೆಂದರೆ ಆಗ ಕೆಲವರಿಗೆ ಕೊಟ್ಟುಬಿಟ್ಟರು. ಕೆಲವರಿಗೆ ಕೊಟ್ಟಮೇಲೆ ಉಳಿದವರಿಗೂ ಕೊಡಬೇಕು, ಹಾಗಾಗಿ ಉಳಿದ 17–18 ಸಾವಿರ ಜನ ನಮಗೂ increment ಕೊಡಿ ಎಂದು ಕೇಳಿದರು. ಅದು ಹೈಕೋರ್ಟ್, ಸುಪ್ರೀಂಕೋರ್ಟ್ ಎಲ್ಲಾ ಹಂತದಲ್ಲಿಯೂ ಅವರಿಗೆ increment ಕೊಡಬೇಕೆಂದಾಯಿತು. ನನ್ನ ಪ್ರಶ್ನೆ ಈಗ ಈ ordinance ಮಾಡಿದ್ದೀರಿ. ಈ Act ಅನ್ನು ನೀವು ಈಗ ಇಲ್ಲಿ regularize ಮಾಡಿಕೊಳ್ಳುತ್ತಿದ್ದೀರಿ. ಇದು challenge ಆಗಬಾರದು, ಇದರ ಬಗ್ಗೆ ಎಚ್ಚರಿಕೆ ಇರಬೇಕು. ಈಗ ಒಂದು ಹಂತದಲ್ಲಿ ಸರ್ಕಾರಕ್ಕೆ ಶಿಕ್ಷಕರು ಮಾಡುತ್ತಿರುವಂಥ ಕೆಲಸದ ಹಿನ್ನೆಲೆಯಲ್ಲಿ 300 ಕೋಟಿ ರೂಪಾಯಿಗಳನ್ನು ಅವರಿಗೆ ಕೊಟ್ಟು ಬಿಡೋಣವೆಂದು ನಿರ್ಣಯ ಮಾಡುವುದು ಒಂದು ಭಾಗ. ಏಕೆಂದರೆ ಶಿಕ್ಷಕರು ಅಷ್ಟು ಒಳ್ಳೆಯ ಕೆಲಸವನ್ನೇ ಮಾಡುತ್ತಿದ್ದಾರೆ. ಮತ್ತೆ ಈಗ ಈ ತಿದ್ದುಪಡಿ ಮಾಡಿ ಪುನಃ ಈ Act ಅನ್ನು question ಮಾಡುವಂಥ ಸ್ಥಿತಿ ಬಂದರೆ ಮತ್ತಷ್ಟು ಆರ್ಥಿಕ ಭಾರವನ್ನು ಹೊರುವಂಥ ಸ್ಥಿತಿ ಸರ್ಕಾರಕ್ಕೆ ಬರುತ್ತದೆ. ಇಷ್ಟು ವರ್ಷಗಳಿಂದ ಹಾಗೆ ಇದ್ದು ಇಷ್ಟು ಪ್ರಮಾಣದಲ್ಲಿ ಹಣ ಎಂದರೆ 300–00 ಕೋಟಿ ರೂಪಾಯಿಗಳ ಮೇಲೆ ಆಗಿದೆ. ಮತ್ತೆ ಈ Act challenge ಮಾಡಿ ಇನ್ನಷ್ಟು ಸಮಸ್ಯೆ ಆದರೆ ಮತ್ತಷ್ಟು ಹಣ accumulate ಆಗುತ್ತದೆ. ಹಾಗಾಗಿ ಈ ವಿಚಾರದಲ್ಲಿ ಸರ್ಕಾರ ವಿವೇಚನೆಯಿಂದ ಯೋಚಿಸಬೇಕೆಂದು ಬೇಡಿಕೊಳ್ಳುತ್ತೇನೆ. ಆದರೆ, ಶಿಕ್ಷಕರ ಬೇಡಿಕೆಯಿದೆ. ಶಿಕ್ಷಕರನ್ನು ಪ್ರತಿನಿಧಿಸುವಂತಹ ಜನಪ್ರತಿನಿಧಿಗಳ ಬೇಡಿಕೆಯಿದೆ. ಇದು ಸರ್ಕಾರದಲ್ಲಿ ತಪ್ಪಾಗಿದೆ. ಏನೆಂದರೆ, ಅರ್ಧ ಜನಕ್ಕೆ ಕೊಟ್ಟು ಅಂದರೆ ಕೆಲವರಿಗೆ ಕೊಟ್ಟು ಕೆಲವರಿಗೆ ಕೊಡದೇ ಇರುವುದು ತಪ್ಪು. ಅದನ್ನು ನಾವೆಲ್ಲರೂ ಒಪ್ಪಿಕೊಳ್ಳಲೇಬೇಕಾಗಿರುವಂತಹದ್ದು. ಕೇವಲ ಬೇರೆ ಮಾತೃ ಭಾಷೆಯವರಿಗೆ ಮಾತ್ರ ಕೊಟ್ಟು ಮುಗಿಸಿದ್ದರೆ ಅದು ಒಂದು ರೀತಿ argument ಆದರೂ ಇರುತ್ತಿತ್ತು. ಕನ್ನಡ ಮಾತೃ ಭಾಷೆಯವರಿಗೆ ಕೆಲವರಿಗೆ ಕೊಟ್ಟು ಕೆಲವರಿಗೆ ಕೊಡದೇ ಹೀಗೆ ತಾರತಮ್ಯವಾಗಿರುವುದೆಲ್ಲಾ ಸರಿಯಲ್ಲ. ಇದರ ಬಗ್ಗೆ ಸರ್ಕಾರ ಯೋಚಿಸಬೇಕು. ಮತ್ತೊಂದು ಸಲ ನನ್ನ ಒಂದು

ಸಲಹೆ ಏನೆಂದರೆ, ಮಾನ್ಯ ಜಯಚಂದ್ರರವರು ಹಿರಿಯ ಸಚಿವರಾಗಿದ್ದಾರೆ. ಇದನ್ನು ಅಂದರೆ ಈ ಬಿಲ್‌ಅನ್ನು ಇಲ್ಲಿ ಸಧ್ಯಕ್ಕೆ ಬೇಕಾದರೆ ತಡೆಹಿಡಿದು ನನ್ನ ಒಂದು ಸಲಹೆ ರೀತಿಯಲ್ಲಿ ಕೊಡುತ್ತಿರುವುದು ಏನೆಂದರೆ, ಶಿಕ್ಷಕರ ಮತ್ತು ಪದವೀಧರರ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂತಹ ವಿಧಾನ ಪರಿಷತ್‌ನ ಸದಸ್ಯರು ಇದ್ದಾರೆ. ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿ ಈ ಬಿಲ್‌ಅನ್ನು ಮುಂದೆ ಯಾವ ರೀತಿಯಲ್ಲಿ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಬೇಕಾದರೆ ಒಂದು ಅವಕಾಶವಿದೆ, ಯೋಚಿಸಬಹುದು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪಶುಸಂಗೋಪನೆ ಹಾಗೂ ಮುಜರಾಯಿ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಸರ್ಕಾರದಲ್ಲಿ ಈ ಕಡೆಯಲ್ಲಿ ಇದ್ದಾಗ ಯಾವ tone ಇರುತ್ತದೋ ಅದು ಆ ಕಡೆಗೆ ಹೋದಾಗ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ ಎಂಬುದು ಈಗ ಗೊತ್ತಾಗುತ್ತಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಏಕೆಂದರೆ, ನಾನು ನಿಮ್ಮಿಂದಲೇ ನೋಡಿಕೊಂಡಿದ್ದೇನೆ. ನೀವು ಈ ಕಡೆಗೆ ಇದ್ದಿರಿ. ಅವರೇ ಕಾರಣರಾಗಿದ್ದಾರೆ. ಅವರು ಇಲ್ಲಿ ಉಪಸಾಯಕರಾಗಿದ್ದಾಗ ನಮಗೆಲ್ಲಾ ಹೇಳಿ ಹೇಳಿ ಹೇಳಿ ಈಗ ....

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಕಾಗೇರಿಯವರು ಸಚಿವರಾಗಿದ್ದಂತಹ ಸಂದರ್ಭದಲ್ಲಿ ಇದೇ ಇದರ ಮೇಲೆ ಸುಪ್ರೀಂಕೋರ್ಟ್‌ಗೆ ಹಾಕಿದ್ದರು. ಅವರು ಮಾಡಿದ ಕೆಲಸವನ್ನು ನಾವು ಮುಂದುವರೆಸುತ್ತಿದ್ದೇವೆ. ಅದನ್ನು ಬಿಟ್ಟರೆ ಬೇರೆ ಇಲ್ಲ. ಈಗ ಅದರ ಹಿನ್ನೆಲೆಯಲ್ಲಿ ನೀವು ಅನೇಕ ಸಲಹೆಗಳನ್ನು ಕೊಡುತ್ತಿದ್ದೀರಿ. ಇದು ಸಹಜ. ಎಲ್ಲೋ ಒಂದು ಕಡೆಗೆ ಶಿಕ್ಷಕರು ಸಹ ಒಂದು ರೀತಿಯಲ್ಲಿ ಮತದಾರರಾಗಿರುತ್ತಾರೆ. ಹಾಗಾಗಿ ಅವರ ಮನಸ್ಸಿಗೆ

ನೋವಾಗಬಾರದು ಎನ್ನುವ ಕಾರಣಕ್ಕೋಸ್ಕರ ತಾವು ಆ ಮಾತನ್ನು ಆಡಿರಬಹುದು. ಅದನ್ನು ನಾನು ಹೇಳುತ್ತೇನೆ. ಈಗ ಏನಾಗುತ್ತದೆ ಎಂದರೆ,. . .

ಶ್ರೀ ಸಿ.ಟಿ. ರವಿ:– ಬರೀ ಮತದಾರರಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಈಗ ordinance ಬಂದಾಗಿದೆ. Ordinance ಬಂದು forceಗೆ ಬಂದಾಗಿದೆ. ಇದು only replacementಗೆ ಬರುತ್ತಿರುವುದು. ಈಗ ಒಂದು ಪಕ್ಷ 300 ಕೋಟಿ ರೂಪಾಯಿಗಳು, ನೋಡಿ ಆಂಧ್ರ ಪ್ರದೇಶದಲ್ಲಿಯೂ ಕೂಡ ಇದೇ experience ಆಗಿದೆ. ಆ ರಾಜ್ಯದಲ್ಲಿಯೂ ಕೂಡ ಇದನ್ನು legislative ತಂದು ಅದನ್ನು stop ಮಾಡಿದರು. ಈಗ ನಾವು ಏನಾದರೂ ಮಾಡುವುದಕ್ಕೆ ಹೋದರೆ contempt petitions ಆಗುತ್ತದೆ. ನಿಜ ಹಿಂದೆ ಆಗಿರುವಂತಹ ತಪ್ಪು ಅದು. ಕೆಲವರಿಗೆ ಕೊಟ್ಟರು, ಬಹಳ ಜನರಿಗೆ ಕೊಡಲಿಲ್ಲ. ಈಗ ಎಲ್ಲಾ contempt petitions ಎಷ್ಟಿದೆ ಎಂದರೆ ಸುಮಾರು 200–300 contempt petitions ಇದೆ. ಇದು ದೊಡ್ಡ ಹೊರೆಯಾಗುತ್ತಿದೆ. ಆ ಕಾರಣಕ್ಕೋಸ್ಕರ ನಾವು legislation ತರುವಂತಹದ್ದು ಅನಿವಾರ್ಯವಾಯಿತು. ನಿಮ್ಮಿಂದಲೇ ಆ ಪ್ರಕ್ರಿಯೆ ಪ್ರಾರಂಭವಾಗಿದ್ದು. ಅದನ್ನು ನಾವು ಮುಂದುವರೆಸುತ್ತಿದ್ದೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ನಮಗಿಂತ ಹಿಂದಿನ ಸರ್ಕಾರದಲ್ಲಿಯೂ ಸಹ ಅದು ಇತ್ತು. ಅದು ಬಹಳ ಹಿಂದಿನಿಂದ ಇದೆ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಉಪಾಧ್ಯಕ್ಷರೆ, ಈಗ ನೀವು ಕೋರ್ಟ್‌ಗೆ ಹೋಗಿದ್ದೀರಿ. ಅದನ್ನು ನಾವು ಮುಂದುವರೆಸುತ್ತಿದ್ದೇವೆ. ಈ Act ಅನ್ನು ಏನಾದರೂ challenge ಮಾಡುತ್ತೇವೆ ಎನ್ನುವುದಾದರೆ ಅದಕ್ಕೆ ನಾವು caveat ಅನ್ನು ಹಾಕುತ್ತೇವೆ. ಈ Act pass ಆದ ತಕ್ಷಣವೇ caveat ಸಹ ಹಾಕುತ್ತೇವೆ. ಯಾವುದೇ ರೀತಿಯಲ್ಲಿಯೂ ಕೂಡ ಇದನ್ನು ಮುಂದುವರೆಸುವುದಕ್ಕೆ ಬಿಡುವುದಿಲ್ಲ. ಈಗಾಗಲೇ ಸರ್ವೋಚ್ಚ ನ್ಯಾಯಾಲಯದಲ್ಲಿ ಅನೇಕ ತೀರ್ಪುಗಳು ಕೂಡ ಬಂದಿದೆ. ಇಂತಹ

ವಿಚಾರದಲ್ಲಿ ಸರ್ಕಾರದ ವಿವೇಚನೆ ಅಂತಿಮವಾಗುತ್ತದೆ. ಸರ್ಕಾರದ ತೀರ್ಮಾನವೇ ಅಂತಿಮವೆನ್ನುವುದು ಸರ್ವೋಚ್ಚ ನ್ಯಾಯಾಲಯದಲ್ಲಿ ತೀರ್ಪು ಕೂಡ ಬಂದಿದೆ. ಈಗ financial matters ನಲ್ಲಿ ಇದನ್ನು ನೀವು constitutional validity ಇಟ್ಟುಕೊಂಡು question ಮಾಡುವುದಕ್ಕೆ ಆಗುವುದಿಲ್ಲ. ಇದು ಸರ್ಕಾರಕ್ಕೆ ಬಿಟ್ಟಂತಹ ವಿವೇಚನೆ ಎನ್ನುವುದು ಸುಪ್ರೀಂಕೋರ್ಟ್‌ನಿಂದ ಬಂದಿರುವುದರಿಂದ ಯಾವುದೇ ರೀತಿಯಲ್ಲಿಯೂ ಕೂಡ ಅನ್ಯಾಯವಾಗುವುದಿಲ್ಲ ಮತ್ತು ಇದು ತುಂಬಾ ಹೊರೆಯಾಗುತ್ತದೆ. ಈಗ ಮತ್ತೆ ಇನ್ನು ಏನಾಗಿದೆ ಎಂದರೆ ಬಹಳಷ್ಟು ಜನ ಟೀಚರ್ಸ್ ರಿಟೈರ್ಡ್ ಆಗಿ ಹೋಗಿದ್ದಾರೆ. ರಿಟೈರ್ಡ್ ಆಗಿ ಹೋಗಿ ಬಹಳಷ್ಟು ಜನ ಮನೆಗಳಲ್ಲಿದ್ದಾರೆ. ಈಗ 300 ಕೋಟಿ ರೂಪಾಯಿಗಳನ್ನು ಕೊಡಬೇಕಾದರೆ ಎಲ್ಲಾ ರಿಟೈರ್ಡ್ ಆಗಿ ಮನೆಗಳಲ್ಲಿರುವವರಿಗೆ ಕೊಡಬೇಕಾಗುತ್ತದೆ. ಆದರೆ, ಒಂದು ಮೂಲ ಪ್ರಶ್ನೆ ಏನೆಂದರೆ, ಕರ್ನಾಟಕದಲ್ಲಿಯೇ ಇದ್ದು ಕನ್ನಡ ಭಾಷೆಯನ್ನು ಪಾಸ್ ಮಾಡಿದವರಿಗೆ increment ಕೊಡುವುದು ಎಂದು ಇದೆ. ಅದು ಹಿಂದೆ ಸರ್ಕಾರಿ ಆದೇಶ ಏಕೆ ಬಂತು ಎನ್ನುವುದು ವಿಶೇಷವಾದಂತಹ ಸಂದರ್ಭ. ಆವತ್ತು ಅದನ್ನು ಮಾಡಿದ್ದಾರೆ. ಅದು ಖಾಸಗಿ institutions ಗೆ ಬರುವುದಿಲ್ಲ. ಈಗಾಗಲೇ KCSR Act ಪ್ರಕಾರ they do not come under the category of the Government employees. Government employees ಎಂದು Government order ಇರುವುದರಿಂದ ಆ ವ್ಯಾಪ್ತಿಯಲ್ಲಿ ಇವತ್ತು private institutions ಬರುವುದಿಲ್ಲ. ಈ interpretationನ ಹಿನ್ನೆಲೆಯಲ್ಲಿ ಈ ಒಂದು ಮಸೂದೆಯನ್ನು ತಂದಿದ್ದೇವೆ. ಇದನ್ನು ಹೆಚ್ಚಿಗೆ ಚರ್ಚೆ ಮಾಡುವುದು ಬೇಡ. ಈಗ ತಾವು ಹೇಳಿದ ಹಾಗೆ ಅಲ್ಲಿ Council ನಲ್ಲಿ ದೊಡ್ಡ ಚರ್ಚೆಯಾಗುತ್ತದೆ. ಈಗ ಅಲ್ಲಿ ಅವರನ್ನು ಕರೆದು ಮಾತನಾಡಿ ಎನ್ನುವುದರ ಬದಲು ಅಲ್ಲಿ ಹೋದಮೇಲೆ ಅಲ್ಲಿ ಇದು ಬಹಳಷ್ಟು ಚರ್ಚೆಯಾಗುತ್ತದೆ. ಅಲ್ಲಿ ಏನಾಗುತ್ತದೆ ಎಂದು ನೋಡೋಣ. ಅಲ್ಲಿಯೂ ಸಹ convince ಮಾಡುವಂತಹ ಪ್ರಯತ್ನ ಮಾಡುತ್ತೇವೆ. ಈಗ 300 ಕೋಟಿ ರೂಪಾಯಿಗಳ ಹಣವನ್ನು ಬಳಸಬೇಕಾದಾಗ ಇಂತಹ matters ಗೆ ಸರ್ಕಾರಕ್ಕೆ ಒಂದು ಪರಮೋಚ್ಚ

ಅಧಿಕಾರವಿರುತ್ತದೆ. ಅದನ್ನು ಚಲಾಯಿಸಿ ಇವತ್ತು ನಾವು ಇದನ್ನು ಮಂಡನೆ ಮಾಡಿದ್ದೇವೆ. ದಯಮಾಡಿ ಇದನ್ನು ಪಾಸ್ ಮಾಡಬೇಕು.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಆರ್.ವಿ. ದೇಶಪಾಂಡೆ ಸಾಹೇಬರು ಈಗ ಅಧಿನಿಯಮ 14ಅನ್ನು ತಂದಿದ್ದಾರೆ. ಆವತ್ತು ಈ ಸಮಸ್ಯೆ ಉದ್ಭವವಾಗಿ ಕೋರ್ಟ್‌ನಲ್ಲಿ ಚಾಲೆಂಜ್ ಆಯಿತು. ಮತ್ತೆ ಕೋರ್ಟ್ ಹೇಳಿದ ನಂತರವೂ ನೀವು ಇದನ್ನು ಮತ್ತೆ ಇಲ್ಲಿ ಪಾಸ್ ಮಾಡಿದರೆ ಇದ್ದಂತಹ ಅರ್ಧ ಮಂದಿಗೆ ಕೊಟ್ಟು ಅರ್ಧ ಮಂದಿಗೆ ಬಿಡಬಾರದು ಎಂದು . . .

ಶ್ರೀ ಟಿ.ಬಿ. ಜಯಚಂದ್ರ:– ಅರ್ಧ ಮಂದಿಗೆ ಅಲ್ಲ. ಕೆಲವರಿಗೆ ಮಾತ್ರ ಕೊಟ್ಟರು, ಕೆಲವು ಜನರಿಗೆ ಮಾತ್ರ. ಅಧಿಕಾರಿಗಳ ಮಟ್ಟದಲ್ಲಿ ತಪ್ಪಾಯಿತು. ತಪ್ಪಾಗಿ ಕೆಲವರಿಗೆ ಕೊಟ್ಟರು.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಒಂದು ಸಲ ಕೊಟ್ಟು close ಮಾಡಿದರು.

ಶ್ರೀ ಟಿ.ಬಿ. ಜಯಚಂದ್ರ:– ಅದನ್ನೇ ಆಧರಿಸಿ ಸರ್ವೋಚ್ಚ ನ್ಯಾಯಾಲಯದವರೆಗೆ ತೆಗೆದುಕೊಂಡು ಹೋದರೂ. ಕೋರ್ಟ್ ಒಂದು base ಮೇಲೆ ಅವರಿಗೆ ಕೊಟ್ಟಿದ್ದೀರಿ ಎಂದು ನೀವು ಕೊಡಿ ಎಂದಲ್ಲ. Government employees ಗೆ ಕೊಟ್ಟಮೇಲೆ ಇವರಿಗೆ ಏಕೆ ಕೊಡಬಾರದು ಎಂದು ಪ್ರಶ್ನೆ ಮಾಡಿತು. ಬಹುಶಃ ಅದು ಏನಾಗಿದೆ ಎಂದರೆ, ಕೋರ್ಟ್‌ನಲ್ಲಿಯೂ ಕೂಡ ಎಲ್ಲೋ ಒಂದು ರೀತಿಯಲ್ಲಿ ಸಮರ್ಪಕವಾದಂತಹ ವಾದವನ್ನು ಮಾಡದೇ ಇರುವುದು ಕೂಡ ಒಂದು ಕಾರಣವಾಗಿದೆ. ಉಚ್ಚ ನ್ಯಾಯಾಲಯದಲ್ಲಿ ಆಯಿತು, ಸರ್ವೋಚ್ಚ ನ್ಯಾಯಾಲಯದಲ್ಲಿಯೂ ತೀರ್ಮ ಬಂತು. ಆದರೆ, ಸರ್ಕಾರಕ್ಕೆ ಅಧಿಕವಾದಂತಹ ಹೊರೆಯಾಗುತ್ತದೆ. ರಿಟೈರ್ಡ್ ಆಗಿ ಹೋಗಿರುವಂತಹವರಿಗೆ ಇದನ್ನು ಕೊಡುವಂತಹ benefit ಆಗುತ್ತದೆ. ಆ ಕಾರಣಕ್ಕೋಸ್ಕರ ನಾವು ಈಗಾಗಲೇ ordinance ಅನ್ನು ತಂದು stop ಮಾಡಿ

ಆಗಿದೆ. Ordinanceನ replacement ಗೆ ಇವತ್ತು ಸದನದ ಮುಂದೆ ಬಂದಿದೆ. ಒಪ್ಪಿಗೆ ಕೊಡಬೇಕು.

ಉಪಾಧ್ಯಕ್ಷರು:– ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಶ್ರೀ ಜೆ.ಆರ್. ಲೋಬೊ:– ಮಾನ್ಯ ಉಪಾಧ್ಯಕ್ಷರೆ, Clause 2(b)ಯಲ್ಲಿ "ಮತ್ತು ಪರಂತು, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಇರತಕ್ಕದ್ದು: ಎಂದು ಇದೆ. ಬಹುಶಃ ಇದರಲ್ಲಿ ಸ್ವಲ್ಪ ತಿದ್ದುಪಡಿ ಮಾಡಬೇಕಾಗುತ್ತದೆ. ಏಕೆಂದರೆ, ಸರ್ಕಾರದ "ಮತ್ತು ಪರಂತು, ಕೇವಲ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ ಮಾತ್ರ ಸೇವಾ ಷರತ್ತುಗಳನ್ನು ವಿಧಿಸುವುದು" ಎಂದು ಇದೆ. ಇದರಲ್ಲಿ ಏನಾಗುತ್ತದೆ ಎಂದರೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವಾ ಷರತ್ತುಗಳು ಎಂದರೆ "ಅನುದಾನಿತ ಮತ್ತು ಅನುದಾನಿತ ರಹಿತ ಎಲ್ಲಾ ನೌಕರರೂ ಕೂಡ ಇದರಲ್ಲಿ ಸೇರುತ್ತಾರೆ." ಅದು ಬಹುಶಃ ಸರ್ಕಾರದ ಉದ್ದೇಶವಲ್ಲ ಎನಿಸುತ್ತದೆ. ಅದಕ್ಕೋಸ್ಕರ ಅಲ್ಲಿ ಒಂದು ಪದವನ್ನು ಸೇರಿಸಬೇಕಾಗಿದೆ. "ಮತ್ತು ಪರಂತು, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನಿತ ನೌಕರರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಇರತಕ್ಕಂದ್ದು: ಎಂದು ಮಾಡಬೇಕು. 'ಅನುದಾನಿತ' ಎಂಬ word ಅನ್ನು ಸೇರಿಸದೇ ಇದ್ದರೆ ಎಲ್ಲಾ ನೌಕರರು ಇದರಲ್ಲಿ ಸೇರಿದ ಹಾಗೆ ಆಗುತ್ತದೆ.

ಉಪಾಧ್ಯಕ್ಷರು:– ಕಾನೂನು ಸಚಿವರೇ ಇದನ್ನು ನೋಡಿ.

ಶ್ರೀ ಜೆ.ಆರ್. ಲೋಬೊ:– ಎಲ್ಲಾ ನೌಕರರು ಇದರಲ್ಲಿ ಸೇರಿದ ಹಾಗೆ ಆಗುತ್ತದೆ. ಇದು ನಾಳೆ disputeಗೆ ಕಾರಣವಾಗುತ್ತದೆ. ಅದಕ್ಕೋಸ್ಕರ ಇದರಲ್ಲಿ ಬಹುಶಃ specific ಆಗಿ 'ಅನುದಾನಿತ' ಎಂದು ಸೇರಿಸಿದರೆ. .

ಶ್ರೀ ಟಿ.ಬಿ. ಜಯಚಂದ್ರ:– ಇದು specific ಆಗಿ ಇದೆ. "ಮತ್ತು ಪರಂತು, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವಾ ಷರತ್ತುಗಳು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂತೆ ಇರತಕ್ಕದ್ದು: ಎಂದು ಇದೆ.

ಶ್ರೀ ಜೆ.ಆರ್. ಲೋಬೊ:– ಹಾಗಾದರೆ ಇದರಲ್ಲಿ ಎಲ್ಲಾ ನೌಕರರು ಸೇರುತ್ತಾರಾ? 'ಅನುದಾನಿತ' ಎಂದು ಅಲ್ಲಿ word ಬರಬೇಕು. ಅಲ್ಲಿ ಅನುದಾನಿತ word ಇಲ್ಲ. "ಮತ್ತು ಪರಂತು, ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವಾ ಷರತ್ತುಗಳು" ಎಂದು ಇದೆ. ಅಂದರೆ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಎರಡು ವಿಧದ ನೌಕರರಿದ್ದಾರೆ.

Sri T.B. Jayachandra:- ಹೌದು. It applies to the private institutions.

ಶ್ರೀ ಜೆ.ಆರ್. ಲೋಬೊ:– ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಎರಡು ವಿಧದ ನೌಕರರಿದ್ದಾರೆ.

ಶ್ರೀ ವೈ.ಎಸ್.ವಿ. ದತ್ತ:– ಅವರು ಹೇಳುತ್ತಿರುವುದರಲ್ಲಿ ಒಂದು ಅರ್ಥವಿದೆ. ಅನುದಾನದಲ್ಲಿ ಎರಡು ತರಹ ಇದೆ. Entire institution ಅನುದಾನಿತವಾಗಿದೆ. ಕೆಲವು individual ಅನುದಾನಿತವಿದೆ. ಹಾಗಾಗಿ ಅವರು ಹೇಳುತ್ತಿರುವುದು ಏನೆಂದರೆ, ಅನುದಾನಿತ ಶಿಕ್ಷಣ ಸಂಸ್ಥೆಗಳು ಎನ್ನುವುದರ ಜೊತೆಗೆ 'ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿನ ಅನುದಾನಿತ ನೌಕರರಿಗೆ' ಎಂದು ಸೇರಿಸಿ ಎಂದು ಹೇಳುತ್ತಿದ್ದಾರೆ.

ಶ್ರೀ ಜೆ.ಆರ್. ಲೋಬೋ:– ಏಕೆಂದರೆ, Grant in aid . .

ಶ್ರೀ ಟಿ.ಬಿ. ಜಯಚಂದ್ರ:– ತಾವು ಸಲಹೆ ಕೊಟ್ಟಿದ್ದೀರಿ. ಆ ತರಹ ಆಗುತ್ತದೆ ಎಂದು ನಾವು ಯೋಚನೆ ಮಾಡುತ್ತೇವೆ. ಆದರೆ, ಅಷ್ಟೊಂದು deep ಆಗಿ ಹೋಗತಕ್ಕಂತಹ ಅವಶ್ಯಕತೆಯಿಲ್ಲ. ಇದು already ordinance ಗೆ

ಕೊಟ್ಟು ಈಗಾಗಲೇ ಒಪ್ಪಿಗೆ ಕೂಡ ಆಗಿ ಹೋಗಿದೆ. ಹಾಗಾಗಿ it is a closed chapter.

ಶ್ರೀ ಜೆ.ಆರ್. ಲೋಬೊ:– ಮಾನ್ಯ ಉಪಾಧ್ಯಕ್ಷರೆ, ಇದು ಸಮಸ್ಯೆಯಾಗುತ್ತದೆ.

ಉಪಾಧ್ಯಕ್ಷರು:– ಇದು ordinance replacement ಗೆ bill ತಂದಿರುವುದು. Ordinance ನಲ್ಲಿ ಏನಾಗಿದೆ ಅದನ್ನು . . .

ಶ್ರೀ ಜೆ.ಆರ್. ಲೋಬೊ:– ಮಾನ್ಯ ಉಪಾಧ್ಯಕ್ಷರೆ, ಒಂದು submission ಮಾಡುತ್ತೇನೆ. ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲವು ನೌಕರರು grant in aid ಇದ್ದಾರೆ. ಈಗ grants ಕಡಿಮೆ ಮಾಡಿರುವ ಕಾರಣ ಈಗ ಎಷ್ಟೋ institutions ನಲ್ಲಿ 10–20% employees ಮಾತ್ರ grant in aid ಇರುತ್ತಾರೆ. ಉಳಿದ 80% employees grant in aid ಇರುವುದಿಲ್ಲ. ಅವರ management staff ಇರುತ್ತಾರೆ. ಈ ಒಂದು clause ನಲ್ಲಿ ತಾವು 'ಅನುದಾನಿತ' ಎಂದು ಸೇರಿಸದೇ ಹೋದರೆ ಯಾರಿಗೆ grant ಇದೆ, ಯಾರಿಗೆ grant ಇಲ್ಲ ಅವರೆಲ್ಲರಿಗೂ ಕೂಡ ಇದರಲ್ಲಿ ಸರ್ಕಾರ ಕ್ರಮ ಬದ್ಧ ಮಾಡಬೇಕಾಗುತ್ತದೆ. ಅದು ಸರಿಯಲ್ಲ. ಅದಕ್ಕೋಸ್ಕರ "ಅನುದಾನಿತ ನೌಕರರಿಗೆ ಮಾತ್ರ" ಇದು ಅನ್ವಯಿಸುವಂತೆ ಆಗಬೇಕು.

ಉಪಾಧ್ಯಕ್ಷರು:– Law Minister ಹೇಳಿ. Clarify ಮಾಡಿ ಸಾಕು.

ಶ್ರೀ ಟಿ.ಬಿ. ಜಯಚಂದ್ರ:– ಈಗ ಕನ್ನಡ ಶಾಲೆಯಲ್ಲಿ, ಅನುದಾನಿತ ಶಾಲೆಗಳಲ್ಲಿ ಕನ್ನಡ ಕಲಿಸತಕ್ಕಂತಹವರಿಗೆ ಅದು ಯಾವುದೇ ರೀತಿಯಲ್ಲಿಯೂ ಕೂಡ ಅದನ್ನು prescribe ಮಾಡಿಲ್ಲ. ಹಾಗಾಗಿ ಅವರಿಗೆ ಯಾವುದೇ ರೀತಿಯಾದಂತಹ eligibility ಕೂಡ ಇಲ್ಲ. ಹಾಗಾಗಿ ಇದು mis-interpretation ಏನೂ ಆಗುವುದಿಲ್ಲ.

ಉಪಾಧ್ಯಕ್ಷರು:– O.k. ಆಯಿತು.

ಶ್ರೀ ಟಿ.ಬಿ. ಜಯಚಂದ್ರ:– we have totally rejected. Un-aided institutionsಗೆ ಕೊಡತಕ್ಕಂತಹದ್ದನ್ನು ಸಂಪೂರ್ಣವಾಗಿ delete ಮಾಡಿದ್ದೇವೆ.

ಶ್ರೀ ಜೆ.ಆರ್. ಲೋಬೊ:– ಮಾನ್ಯ ಉಪಾಧ್ಯಕ್ಷರೆ, ಇಲ್ಲಿ English ನಲ್ಲಿ ಇದೆ ನೋಡಿ. ನಾವು regulate ಮಾಡುವುದಕ್ಕೆ ಹೋಗುವುದು all service conditions. It is not the increment alone. Financial benefits ಮಾತ್ರವಲ್ಲ. All service conditions . . . ಇಲ್ಲಿ ಬೇಕಾದರೆ englishನಲ್ಲಿದೆ ನೋಡಿ. "Provided further that conditions of services of the employees" Services of the employees ಎಂದರೆ ಎಲ್ಲವೂ ಕೂಡ conditions ಆಗುತ್ತದೆ. It is not the increment alone. It is not the financial benefit alone. All the service conditions of the employees are regulated. ಅದಕ್ಕೆ ತಮಗೆ suggestions ಹೇಳುವುದು ಏನೆಂದರೆ, ಯಾವ employees ಅನ್ನು ನೀವು grant in aid ಒಳಗೆ ತರುತ್ತೀರಿ, ಅವರಿಗೆ ಇದನ್ನು ಅನ್ವಯ ಮಾಡಿ. ಯಾವ employees ಗೆ grant in aid ಅನ್ವಯವಾಗುವುದಿಲ್ಲ ಅಂತಹವರಿಗೆ ನೀವು ತರಬೇಡಿ. ಏಕೆಂದರೆ, ಇದು management ಗೆ ಬಿಟ್ಟಂತಹದ್ದು.

ಶ್ರೀ ಟಿ.ಬಿ. ಜಯಚಂದ್ರ:– ಈ Act ನ ಉದ್ದೇಶವೇನೆಂದರೆ, ನೀವು Section-87 ಒಂದನ್ನು ಮಾತ್ರ ಹೇಳುತ್ತಿದ್ದೀರಿ. ವಿಶೇಷವಾದ ರೀತಿಯಲ್ಲಿ, ವಿಶೇಷವಾದ ಸಂದರ್ಭದಲ್ಲಿ ಈ Act ತಂದಿದ್ದೇವೆ. ಆದ್ದರಿಂದ, ನೀವು ಆ ರೀತಿ mis-interpretation ಮಾಡುವುದಕ್ಕೆ ಅದರಲ್ಲಿ ಅವಕಾಶವಿರುವುದಿಲ್ಲ.

ಉಪಾಧ್ಯಕ್ಷರು:– ಆಯಿತು. ಈಗ ಪರ್ಯಾಲೋಚನಾ ಪ್ರಸ್ತಾಪವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

2014ನೇ ಸಾಲಿನ ಕರ್ನಾಟಕ ಶಿಕ್ಷಣ(ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಖಂಡ 2 ರಿಂದ 4

ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ. 2 ರಿಂದ 4 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನುವುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ರಿಂದ 4 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವದ ಅಂಗೀಕಾರ

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಪರವಾಗಿ):– ಮಾನ್ಯ ಉಪಾಧ್ಯಕ್ಷರೆ, 2014ನೇ ಸಾಲಿನ ಕರ್ನಾಟಕ ಶಿಕ್ಷಣ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು:– ಪ್ರಸ್ತಾವ ಏನೆಂದರೆ,

2014ನೇ ಸಾಲಿನ ಕರ್ನಾಟಕ ಶಿಕ್ಷಣ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಅನುಬಂಧ–9)

ಉಪಾಧ್ಯಕ್ಷರು:– ಜಗದೀಶ್ ಶೆಟ್ಟರ್ ರವರೆ ಪ್ರಾರಂಭ ಮಾಡಿ.